<u>ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು</u>

<u>ಸಿ ಸಿ ನಂ**. 824/2017**</u>

<u>ದಿಃ **14-11-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

| | | | |
|---|---|---|---|
| ಹೆಸರು | ಅಶ್ವಥಪ್ಪ | ಸಿ.ಡಬ್ಲ್ಯೂ | **03** |
| ವಯಸ್ಸು | 42 ವರ್ಷ | ಪಿ.ಡಬ್ಲ್ಯು: | **04** |
| ತಂದೆ ಹೇಸರು | ತಿಪ್ಪಣ್ಣ | | |
| ವೃತ್ತಿ | ಕೂಲಿ | | |
| ವಾಸಸ್ಥಳ | ಮೇಲ್ಯ ಗ್ರಾಮ, ಗೌರಿಬಿದನೂರು. | | |

<u>ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ</u>

ಸಾಕ್ಷಿಯು ನಿಪಿ-7 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7 (ಬಿ) ಎಂದು ಗುರುತಿಸಲಾಯಿತು. ನಿಪಿ-7 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದೆ. ನಿಪಿ-7 ಅನ್ನು ಪೋಲೀಸರು ಬೆಳಿಗ್ಗೆ ಸುಮಾರು 9-00 ರಿಂದ 10-00 ಗಂಟೆಯ ಅವಧಿಯಲ್ಲಿ ಬರೆದಿರುತ್ತಾರೆ. ನಿಪಿ-7 ಅನ್ನು ಜರುಗಿಸುವ ಸಮಯದಲ್ಲಿ ನನ್ನೊಂದಿಗೆ ಚಾಸಾ-4 ಮತ್ತು 5 ರವರು ಇದ್ದರು. ನಿಪಿ-7 ಅನ್ನು ಜರುಗಿಸಿದ ಸ್ಥಳದಲ್ಲಿ ದ್ವಿಚಕ್ರ ವಾಹನ ಮತ್ತು ಲಾರಿಯ ನಡುವೆ ಕೆ.ಇ.ಬಿ ಕಛೇರಿಯ ಬಳಿ ಅಪಘಾತವಾಗಿತ್ತು. ಪೋಲೀಸರು ನನ್ನ ಸಮಕ್ಷಮ ದ್ವಿಚಕ್ರ ವಾಹನ ಮತ್ತು ಲಾರಿಯನ್ನು ಅಮಾನತು ಪಡಿಸಿಕೊಂಡರು ಹಾಗೂ ಸ್ಥಳದಲ್ಲಿ ನಿಪಿ-7 ಕ್ಕೆ ನಮ್ಮ ಸಹಿಯನ್ನು ಪಡೆದುಕೊಂಡರು. ಅಪಘಾತವಾದ ಸ್ಥಳವನ್ನು ನಾನೇ ಪೋಲೀಸರಿಗೆ ತೋರಿಸಿರುತ್ತೇನೆ. ಅಪಘಾತವನ್ನುಂಟು ಮಾಡಿದ ಲಾರಿಯ ನೋಂದಣಿ ಸಂಖ್ಯೆ ಎ ಪಿ 21 ಎಕ್ಸ್ 2038 ಆಗಿರುತ್ತದೆ. ಸಾಕ್ಷಿಯು ನಿಪಿ-1 ರಿಂದ 4 ರಲ್ಲಿರುವ ಛಾಯಾಚಿತ್ರಗಳಲ್ಲಿರುವ ಲಾರಿಯನ್ನು ನೋಡಿ ಗುರುತಿಸಿರುತ್ತಾರೆ. ನ್ಯಾ ಮುಂದೆ ಇರುವ ಆರೋಪಿಗಳು ಲಾರಿಯ ಮಾಲೀಕ ಮತ್ತು ಚಾಲಕನಾಗಿರುತ್ತಾರೆ. ಮಧುಗಿರ ಕೆಡೆಯಿಂದ ಬಂದ ಲಾರಿ ಮತ್ತು ಗೌರಿಬಿದನೂರು ಕಡೆಯಿಂದ ಹೋಗುತ್ತಿದ್ದ ದ್ವಿಚಕ್ರ ವಾಹನದ ನಡುವೆ ಅಪಘಾತವಾಗಿರುತ್ತದೆ.

<u>**(**ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**.)**</u>

ದ್ವಿಚಕ್ರ ವಾಹನವನ್ನು ಮೃತ ರವಿ ಕುಮಾರ್ ರವರು ಚಾಲನೆ ಮಾಡುತ್ತಿದ್ದರು. ಅಪಘಾತವಾದ ಸಮಯದಲ್ಲಿ ಮೃತ ರವಿ ಕುಮಾರ್ ರವರೊಂದಿಗೆ ಅವರ ಪತ್ನಿಯಾದ ವಜಜಾಕ್ಷಿ ರವರು ಸಹ ಇದ್ದರು. ಸದರಿ ವನಜಾಕ್ಷಿ ರವರ ಕಾಲಿಗೆ ಅಪಘಾತದಲ್ಲಿ ಪೆಟ್ಟಾಗಿರುತ್ತದೆ. ಅಪಘಾತಕ್ಕೆ ಒಳಗಾದ ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆ ಕೆಎ 06 ಇಎಫ್ 7805 ಆಗಿರುತ್ತದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ಲಾರಿಯು ಅತಿ ವೇಗವಾಗಿ ಬರುತ್ತಿತ್ತು ಎಂಬ ವಿಚಾರವನ್ನು ಮೃತ ರವಿ ಕುಮಾರ್ ರವರ ಪತ್ನಿ ವನಜಾಕ್ಷಿ ರವರು ಆಸ್ಪತ್ರೆಗೆ ದಾಖಲಾಗುವಾಗ ನನಗೆ ತಿಳಿಸಿರುತ್ತಾರೆ. ಮೃತ ರವಿ ಕುಮಾರ್ ರವರ ತಲೆಗೆ ಏಟಾಗಿತ್ತು. ಸುಮಾರು 6 ವರ್ಷಗಳ ಹಿಂದೆ ಎಂದರೆ 2016 ನೇ ಇಸವಿಯಲ್ಲಿ ಅಪಘಾತವು ಆಗಿರುತ್ತದೆ. ಅಪಘಾತವಾದ ರಸ್ತೆಯಲ್ಲಿ ರಕ್ತದ ಕಲೆಗಳು ಆಗಿದ್ದವು. ಲಾರಿಯ ಮುಂದಿನ ಭಾಗದ ಮಡ್ ಗಾರ್ಡ್ ಬೆಂಡ್ ಆಗಿತ್ತು ಹಾಗೂ ದ್ವಿಚಕ್ರ ವಾಹನವೂ ಸಹ ಬೆಂಡ್ ಆಗಿತ್ತು. ಅಪಘಾತವಾದ ಸ್ಥಳದ ಚಕ್ಕುಬಂದಿ ಪೂರ್ವ-ಪಶ್ಚಿಮ ದಲ್ಲಿ ಕೆ.ಇ.ಬಿ ಕಛೇರಿ ಮತ್ತು ಆಂಜಿನಯ ಸ್ವಾಮಿ ದೇವಸ್ಥಾನ, ಉತ್ತರ-ದಕ್ಷಿಣ ದಲ್ಲಿ ಮಧುಗಿಹಿ ಗೌರಿಬಿದನೂರು ರಸ್ತೆ. ನಿಪಿ-7 ರ ಪಂಚನಾಮೆಯನ್ನು ಪೋಲೀಸರು ಬೆಳಿಗ್ಗೆ 11-00 ಗಂಟೆಯಿಂದ 12-00 ಗಂಟೆಯ ವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲು ಆರೋಪಿಗಳ ಪರ ವಕೀಲರಾದ ಶ್ರೀ ಬಿ.ಎಲ್. ರವರಿಂದಃ

ಅಪಘಾತವಾದ ದಿನಾಂಕ ನನಗೆ ನೆನಪಿಲ್ಲ. ಅಪಘಾತವು ರಾತ್ರಿ 9-00 ಗಂಟೆ ಸಮಯದಲ್ಲಿ ಆಗಿರುತ್ತದೆ. ಅಪಘಾತವಾದ ಸಮಯದಲ್ಲಿ ನಾನು ಗೌರಿಬಿದನೂರಿನಲ್ಲಿದ್ದೆ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ನಿಪಿ-7 ಕ್ಕೆ ಸಹಿ ಮಾಡುವ ಮುನ್ನ ಅದರಲ್ಲಿ ಬರೆದಿರುವ ವಿಚಾರಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-7 ರಲ್ಲಿ ಬರೆದಿರುವ ಮಾಹಿತಿಗಳನ್ನು ಕೆ.ಇ.ಬಿ ಕಛೇರಿ ಬಳಿ ಇರುವ ನಂದಿನಿ ಬೂತ್ ಬಳಿ ಇರುವವರು ತಿಳಿಸಿರುತ್ತಾರೆ. ನಾನು ಮೇಲ್ಯ ಹಳ್ಳಿಯಲ್ಲಿ ವಾಸವಾಗಿದ್ದೇನೆ. ನಿಪಿ-7 ಕ್ಕೆ ಸಹಿ ಮಾಡಲು ಪೋಲೀಸರು ನನಗೆ ನೋಟೀಸನ್ನು ನೀಡಿರುವುದಿಲ್ಲ. ಮೃತ ರವಿ ಕುಮಾರ್ ಮತ್ತು ಅವರ ಪತ್ನಿ ವನಜಾಕ್ಷಿ ರವರು ನನಗೆ ಪರಿಚಯವಿರುತ್ತಾರೆ. ನಿಪಿ-7 ರ ಮಹಜರ್ ಅನ್ನು ಜರುಗಿಸಿದ ದಿನಾಂಕ ನನಗೆ ನೆನಪಿಲ್ಲ. ನಿಪಿ-7 ರ ಮಹಜರ್ ಅನ್ನು ಜರುಗಿಸುವ ಸಮಯದಲ್ಲಿ ಸುಮಾರು 7-8 ಜನರು ಅಲ್ಲಿದ್ದರು. ಅವರ ಹೆಸರುಗಳು ನನಗೆ ಗೊತ್ತಿಲ್ಲ. ಅಪಘಾತವಾದ ಸ್ಥಳದಲ್ಲಿ ಒಂದು ಹಂಪ್ಸ್ ಇರುತ್ತದೆ ಎಂದರೆ ಸಾಕ್ಷಿ ಅಪಘಾತವಾದ ಸ್ಥಳದಲ್ಲಿ ಹಂಪ್ಸ್ ಇರುವುದಿಲ್ಲ, ಅಪಘಾತವಾದ ಸ್ಥಳದಿಂದ ಹಿಂದಕ್ಕೆ ಹಂಪ್ಸ್ ಇರುತ್ತದೆ ಎಂದು ನುಡಿಯುತ್ತಾರೆ. ಅಪಘಾತವಾದ ಸ್ಥಳದಲ್ಲಿರುವ ಹಂಪ್ಸಳ ಹಿಂದೆ ಮತ್ತು ಮುಂದೆ ಗುಂಡಿಗಳು ಬಿದ್ದಿದ್ದವು ಎಂದರೆ ಸಾಕ್ಷಿ

ಅಷ್ಟೊಂದು ಏನು ಗುಂಡಿಗಳು ಬಿದ್ದಿದ್ದರಲ್ಲಿ, ಸಿಂಪಲ್ ಆಗಿ ಗುಂಡಿಗಳು ಇದ್ದವು ಎಂದು ನುಡಿಯುತ್ತಾರೆ. ನಾನು ಅಪಘಾತವಾದ ಸ್ಥಳವನ್ನು ನೋಡಿಲ್ಲ, ಅಪಘಾತವಾದ ಸ್ಥ,ಳದಕ್ಕೆ ಹೋಗಿಲ್ಲ, ಅಪಘಾತವನ್ನು ನೋಡಿಲ್ಲದಿದ್ದರೂ ಸಹ ಪೋಲೀಸರು ನಿಪಿ-7 ಕ್ಕೆ ನನ್ನ ಸಹಿಯನ್ನು ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ವಾಹನಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾ ಮುಂದೆ ಇರುವ ಆರೋಪಿಗಳನ್ನು ಇಂದೇ ಮೊದಲ ಬಾರಿಗೆ ನ್ಯಾ ದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಂದ ಅಪಘಾತವು ಆಗಿರುವುದಿಲ್ಲ ಆದರೆ ಮೃತ ರವಿ ಕುಮಾರ್ ರವರು ತಮ್ಮ ದ್ವಿಚಕ್ರ ವಾಹನವನ್ನು ಅತಿ ವೇಗೆ ಮತ್ತು ಅಜಾಗರೂಕತೆಯಿಂದ ಚಲಾಯಿಸುತ್ತಿದ್ದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಮೃತ ರವಿ ಕುಮಾರ್ ಮತ್ತು ವನಜಾಕ್ಷಿ ರವರು ನನ್ನ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲು ನ್ಯಾ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು